**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**

**ಅಫಜಲಪುರ**

ಉಪಸ್ಥಿತರುಃ

**ಶ್ರೀ ಪ್ರಶಾಂತ ಬಾದವಾಡಗಿ**

ಬಿ.ಎ.,ಎಲ್ಎಲ್.ಬಿ.(ಸ್ಪೇ)

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪುರ

**ಓ.ಎಸ್.ನಂಃ04/2013**

**ದಿನಾಂಕಃ 19ನೇ ಫೆಬ್ರುವರಿ 2018**

**ವಾದಿಃ**

**ಶ್ರೀಮತಿ ರೇವಮ್ಮ ಗಂಡ ಬಸಯ್ಯ ಹಿರೇಮಠ**
ವಯಸ್ಸುಃ80ವರ್ಷ, ಉದ್ಯೋಗಃ ಮನೆ ಕೆಲಸ
ಸಾ।। ಬಡದಾಳ, ತಾ।। ಅಫಜಲಪುರ, ಜಿ।। ಗುಲಬರ್ಗಾ
ಹಾಲಿ ವಸತಿ ಕುಂಬಾರಿ, ತಾ।। ಮತ್ತು ಜಿಲ್ಲೆ।। ಸೋಲಾಪುರ.

(ವಾದಿಯ ಪರ ಶ್ರೀ **ಎಸ್.ಜಿ.ಹುಲ್ಲೂರ,** ವಕೀಲರು.)

// ವಿರುದ್ಧ //

**ಪ್ರತಿವಾದಿಯರುಃ**

1. **ರುದ್ರಯ್ಯ ತಂದೆ ಬಸಯ್ಯ ಹಿರೇಮಠ**
ವಯಸ್ಸುಃ62 ವರ್ಷ, ಉಃ ನಿವೃತ್ತಿ ಸರ್ಕಾರಿ ನೌಕರ
ಸಾ।। ಬ್ಲಾಕ್ ನಂಃ204/3, ಗರ್ವನ್‌ಮೆಂಟ್ ಕಾಲೋನಿ,
ಬಂದ್ರ ಈಸ್ಟ್ ಮುಂಬಾಯಿ-4005.

2. **ಸಿದ್ರಾಮಯ್ಯ ತಂದೆ ಬಸಯ್ಯ ಹಿರೇಮಠ**
ವಯಸ್ಸು:60 ವರ್ಷ, ಉದ್ಯೋಗ: ಒಕ್ಕಲುತನ
ಸಾ।। ಮನೆ ನಂ:109, ಜಂಗಮ ವಾಸ್ತಿ,
ಅಕ್ಕಲಕೋಟ ರಸ್ತೆ ಹತ್ತಿರ, ಕುಂಬಾರಿ,
ತಾ।। ಮತ್ತು ಜಿ।। ದಕ್ಷಿಣ ಸೋಲಾಪುರ.

3. **ಮಲ್ಲಿನಾಥ ತಂದೆ ಬಸಯ್ಯ ಹಿರೇಮಠ**
ವಯಸ್ಸು:52 ವರ್ಷ, ಉದ್ಯೋಗ: ಒಕ್ಕಲುತನ
ಸಾ।। ಶಿವಗಂಗಾ ಕಾಂಪ್ಲೇಕ್ಸ್, 11ೇ ಈಸ್ಟ್
ಮಂಗಲವಾರಪೇಟ, ಸೋಲಾಪುರ-413002.

4. **ಬೌರಮ್ಮ ತಂದೆ ಬಸಯ್ಯ ಹಿರೇಮಠ**
**(ಗಂಡ ಅಯ್ಯಪ್ಪ ನಂದಿಕೋಲ)**
ವಯಸ್ಸು:54 ವರ್ಷ, ಉದ್ಯೋಗ: ಮನೆಕೆಲಸ
ಸಾ।। ಅರ್ಜುಣಗಿ ಗ್ರಾಮ, ತಾ।। ಅಫಜಲಪುರ
ಜಿ।। ಗುಲಬರ್ಗಾ.

5. **ಶ್ರಿಮತಿ ಶರಣಮ್ಮ ತಂದೆ ಬಸಯ್ಯ ಹಿರೇಮಠ**
ವಯಸ್ಸು:56 ವರ್ಷ, ಉದ್ಯೋಗ: ಮನೆ ಕೆಲಸ
ಸಾ।। ಕೌವಲಗಿ ಗ್ರಾಮ, ತಾ।। ಆಳಂದ ಜ।। ಗುಲಬರ್ಗಾ

6. **ಶ್ರೀಮತಿ ಮಲ್ಲಮ್ಮ ತಂದೆ ಬಸಯ್ಯ ಹಿರೇಮಠ**
**(ಗಂಡ ಬಸಯ್ಯ ಸ್ವಾಮಿ)**
ವಯಸ್ಸು:50 ವರ್ಷ, ಉದ್ಯೋಗ: ಮನೆ ಕೆಲಸ
ಸಾ।। ಬೈಗೆಲ್ಲಿ ಗ್ರಾಮ, ತಾ।। ಅಕ್ಕಲಕೋಟ,
ಜ।। ಸೌತ್ ಸೋಲಾಪುರ.

**(**ಪ್ರತಿವಾದಿ ನಂ-1 ಮತ್ತು 2 ರವರ ಪರ ಶ್ರೀ **ಎಸ್.ಕೆ.ಪೂಜಾರಿ.** ವಕೀಲರು**)**

**(**ಪ್ರತಿವಾದಿ ನಂ:3 ರವರ ಪರ ಶ್ರೀ **ಸಿ.ಎಸ್.ಹಿರೇಮಠ,** ವಕೀಲರು**)**

**(**ಪ್ರತಿವಾದಿ ನಂ:4 ರಿಂದ 6 ರವರ ಪರ ಶ್ರೀ **ಎಸ್.ಟಿ.ರಾಠೋಡ.** ವಕೀಲರು**)**

| | | |
|---|---|---|
| ದಾವಾ ಹೂಡಿದ ದಿನಾಂಕ | : | 04-01-2013 |
| ದಾವಾದ ಸ್ವರೂಪ | : | ಪಾಲುವಾಟ್ನಿ ಹಾಗೂ ಪ್ರತ್ಯಕ್ಷ ಕಬ್ಜೆ ಹಾಗೂ ನಿರಂತರ ಮನಾಯಿ ಕುರಿತು. |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿ: | : | 03-03-2014 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿ: | : | 03-08-2017 |
| ತೀರ್ಪಿನ ದಿನಾಂಕ | : | 19-02-2018 |
| ಒಟ್ಟು ಕಾಲಾವಧಿ | : | ವರ್ಷ/ಗಳು ತಿಂಗಳ/ಗಳು ದಿನ/ಗಳು |
| | | -05- -01- -15- |

## ತೀರ್ಪು

ವಾದಿಯು ಪಾಲುವಾಟ್ನಿ, ಪ್ರತ್ಯಕ್ಷ ಕಬ್ಜೆ ಹಾಗೂ ನಿರಂತರ ಮನಾಯಿ ಹಾಗೂ ಕೋರ್ಟ್ ಖರ್ಚು ಕೇಳಿ ಈ ದಾವೆಯನ್ನು ಸಲ್ಲಿಸಿದ್ದು ಇರುತ್ತದೆ.

**ವಾದ ಪತ್ರದ ಸಂಕ್ಷಿಪ್ತ ವಿವರಣೆ :**

1. ವಾದಿಯು ಪ್ರವಾದಿಯರ ತಾಯಿಯಾಗಿರುತ್ತಾಳೆ. ಅಫಜಲಪುರ ತಾಲೂಕಿನ ಬಂದರವಾಡ ಗ್ರಾಮದ ಸೀಮಾಂತರದಲ್ಲಿ ಬರುವ ಜಮೀನು ಸರ್ವೇ ನಂ.65/ಟ ಮತ್ತು 65/ಠ ಒಟ್ಟು ವಿಸ್ತೀರ್ಣ 09-ಎಕರೆ 36-ಗುಂಟೆ ಹಾಗೂ ಅರ್ಜುಣಗಿ ಗ್ರಾಮದ ಸೀಮಾಂತರದಲ್ಲಿ ಬರುವ ಜಮೀನು ಸರ್ವೇ ನಂ.52/ಎ ವಿಸ್ತೀರ್ಣ 07-ಎಕರೆ 13-ಗುಂಟೆ ಆಕಾರ 13.34 ಪೈಸೆ ಹಾಗೂ ಅರ್ಜುಣಗಿ ಗ್ರಾಮದ ಮನೆ ಪಂಚಾಯಿತಿ ನಂ.15/1 ಇವುಗಳು ದಾವಾದ ಆಸ್ತಿಗಳಾಗಿರುತ್ತವೆ. ಸದರಿ ದಾವಾ

ಆಸ್ತಿಗಳ ಸಂಪೂರ್ಣ ವಿವರಣೆಯನ್ನು ವಾದ ಪತ್ರದ ಖಂಡಿಕೆ ಸಂಖ್ಯೆ: 2 ರಲ್ಲಿ ವಿವರಿಸಿರುತ್ತಾರೆ.

2. ವಾದಿ ಮತ್ತು ಪ್ರತಿವಾದಿಯರು ನಂ.1 ರಿಂದ 6 ರವರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಇದ್ದು, ವಾದಿ ಮತ್ತು ಪ್ರತಿವಾದಿ ನಂ.1 ರಿಂದ 3 ರವರ ನಡುವೆ ಇದ್ದ ಬಿನ್ನಾಭಿಪ್ರಾಯದ ಸಲುವಾಗಿ ಸದ್ಯ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಹಾಗೂ ಪ್ರತಿವಾದಿ ನಂ. 4 ರಿಂದ 6 ರವರು ಮನೆಯ ಹೆಣ್ಣು ಮಕ್ಕಳು ಇದ್ದು ಅವರು ಮದುವೆಯಾಗಿ ತಮ್ಮ ತಮ್ಮ ಗಂಡನ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದು ಮುಂದುವರೆದು ವಾದ ಪತ್ರದಲ್ಲಿ ತಿಳಿಸಿರುತ್ತಾಳೆ.

3. ದಾವಾ ಆಸ್ತಿ ಪೈಕಿ ಅರ್ಜುಣಗಿ ಗ್ರಾಮದ ಜಮೀನು ಸರ್ವೇ ನಂ.52 ಇದ್ದು ಇನಾಮು ಜಮೀನು ಆಗಿದ್ದು ಸದರಿ ಜಮೀನು ವಾದಿಯ ಗಂಡನಾದ ಬಸಯ್ಯ ತಂದೆ ರುದ್ರಯ್ಯ ಇತನ ಹೆಸರಿನಲ್ಲಿ ನೋಂದಣಿ ಆಗಿರುತ್ತದೆ. ಅದರಂತೆ ಬಡದಾಳ ಗ್ರಾಮದ ಜಮೀನು ಸರ್ವೇ ನಂ.65/ಟ ಮತ್ತು 65/ಠ ಈ ಜಮೀನುಗಳು ಸರ್ಕಾರದ ಜಮೀನು ಆಗಿದ್ದು ಅವುಗಳನ್ನು ವಾದಿಯ ಗಂಡನಾದ ಬಸಯ್ಯ ಉಳುಮೆ ಮಾಡುತ್ತಿದ್ದನು, ಕಾರಣ ಸದರಿ ಆಸ್ತಿಗಳ ಉಪಭೋಗದ ಹಕ್ಕನ್ನು ಪಡೆಯಲೆಂದು ಪ್ರತಿವಾದಿ ನಂ.2 ಮತ್ತು 3 ರವರು ಅರ್ಜಿ ಸಲ್ಲಿಸಿದ್ದು, ಸದರಿ ಆಸ್ತಿಗಳನ್ನು ಕೂಡ ವಾದಿ ಮನೆತನಕ್ಕೆ ಸರ್ಕಾರವು ನೀಡಿದ್ದು ಇರುತ್ತದೆ. ಆದ್ದರಿಂದ ದಾವಾದ ಜಮೀನು ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಮನೆತನದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ವಾದಪತ್ರದಲ್ಲಿ ತಿಳಿಸಿರುತ್ತಾಳೆ.

**4.** ವಾದಿ ಮುಂದುವರೆದು ಪ್ರತಿವಾದಿ ನಂ.1 ರಿಂದ 3 ರವರು ತನ್ನ ಗಂಡು ಮಕ್ಕಳಿದ್ದು ವಾದಿ ಪ್ರತಿವಾದಿಯರು ದಾವಾದ ಆಸ್ತಿಗಳಲ್ಲಿ ತಲಾ 1/7 ಹಿಸ್ಸೆ ಹೊಂ

ದಿರುತ್ತಾರೆ. ಈ ಕುರಿತು 2012 ರ ದೀಪಾವಳಿ ಸಮಯದಲ್ಲಿ ದಾವಾದ ಆಸ್ತಿಗಳಲ್ಲಿ ವಾದಿ ತನ್ನ 1/7 ಹಿಸ್ಸೆ ಕೇಳಿದ್ದು ಅದಕ್ಕೆ ಪ್ರತಿವಾದಿಯರು ನಂ.1 ರಿಂದ 3 ರವರು ನಿರಾಕರಿಸಿರುತ್ತಾರೆ. ಅದು ಅಲ್ಲದೆ ದಾವಾದ ಆಸ್ತಿಗಳು ಔಪಚಾರಿಕವಾಗಿ 1 ರಿಂದ 3ನೇ ಪ್ರತಿವಾದಿಯರ ಹೆಸರಿನಲ್ಲಿ ಇರುವುದರ ಗೈರು ಫಾಯಿದೆ ತೆಗೆದುಕೊಂಡು ಮಾರಾಟ ಮಾಡುವ ತಜಿ-ವಿಜಿಯಲ್ಲಿರುತ್ತಾರೆ. ಕಾರಣ ವಾದಿ ತನ್ನ 1/7 ಹಿಸ್ಸೆ ಕೇಳಿ ಈ ದಾವೆಯನ್ನು ಮಾಡುವ ಕಾರಣ ಉಂಟಾಗಿರುತ್ತದೆ ಎಂದು ತಿಳಿಸಿರುತ್ತಾಳೆ.

**5.** ವಾದಿ ಮುಂದುವರೆದು ದಾವಾದ ಆಸ್ತಿಯ ಪೈಕಿ ಜಮೀನು ಸರ್ವೇ ನಂ.65 ರ ಪೈಕಿ ಸ್ವಲ್ಪ ಭಾಗದ ಆಸ್ತಿಯನ್ನು ಸಣ್ಣ ನೀರಾವರಿ ಇಲಾಖೆಯವರು ಸ್ವಾಧೀನಪಡಿಸಿಕೊಂಡಿದ್ದು ಆ ಕುರಿತು ಪ್ರತಿವಾದಿ ನಂ.1 ಮತ್ತು 2 ರವರು ಪರಿಹಾರವನ್ನು ಪಡೆದುಕೊಂಡಿರುತ್ತಾರೆ. ಕಾರಣ ಸದರಿ ಸ್ವಾಧೀನಪಡಿಸಿಕೊಂಡ ಜಮೀನನ್ನು 1 ಮತ್ತು 2ನೇ ಪ್ರತಿವಾದಿಯರ ಹಿಸ್ಸೆಗೆ ನೀಡಲು ವಿನಂತಿಸಿರುತ್ತಾಳೆ.

**6.** ದಾವಾದ ಸಮನ್ಸ್ ಪ್ರತಿವಾದಿಯರ ಮೇಲೆ ಜಾರಿ ಆದ ನಂತರ ಪ್ರತಿವಾದಿಯರು ಹಾಜರಾಗಿ ತಮ್ಮ ಪ್ರತಿವಾದ ಪತ್ರಗಳನ್ನು ಸಲ್ಲಿಸಿದ್ದು ಅದರ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿರುತ್ತದೆ.

**7. 1 ಮತ್ತು 2ನೇ ಪ್ರತಿವಾದಿಯರ ಪ್ರತಿವಾದ ಪತ್ರದ ಸಂಕ್ಷಿಪ್ತ ವಿವರಣೆ ః**

1 ಮತ್ತು 2ನೇ ಪ್ರತಿವಾದಿಯರು ವಾದ ಪತ್ರದಲ್ಲಿ ವಿವರಿಸಿದ ಸಂಗತಿಗಳನ್ನು ಅಲ್ಲಗಳೆದು ದಾವಾದ ಆಸ್ತಿಗಳ ಪೈಕಿ ಅರ್ಜುಣಗಿ ಗ್ರಾಮದ ಜಮೀನು ಆಸ್ತಿ 52/ಎ ಮತ್ತು ಮನೆ ಸಂಖ್ಯೆ:15/1 ಇವುಗಳು ಮಾತ್ರ ವಾದಿ

ಮತ್ತು ಪ್ರತಿವಾದಿಯರ ಏಕತ್ರ ಕುಟುಂಬದ ಆಸ್ತಿಗಳಾಗಿರುತ್ತವೆ ಎಂದು ತಿಳಿಸಿರುತ್ತಾರೆ.

8. ಮುಂದುವರೆದು ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿ ಜಮೀನು ಸರ್ವೇ ನಂ:65/ಟ ವಿಸ್ತೀರ್ಣ 04-ಎಕರೆ 38-ಗುಂಟೆ ಆಸ್ತಿಯನ್ನು 1ನೇ ಪ್ರತಿವಾದಿ ದೇಶ ಸೇವೆ ಮಾಡಿ ನಿವೃತ್ತಿ ಹೊಂದಿರುವ ಕಾರಣ ಆತನಿಗೆ ಸರ್ಕಾರವು ದಿನಾಂಕ:25.01.1992 ರಂದು ನೀಡಿರುತ್ತಾರೆ. ಅದರಂತೆ 2ನೇ ಪ್ರತಿವಾದಿ ಕೃಷಿ ಕಾರ್ಮಿಕನಿದ್ದು ಜಮೀನು ಸರ್ವೇ ನಂ:65/ಟ ನ್ನು ಸರ್ಕಾರದವರು ಆತನ ಹೆಸರಿನಲ್ಲಿ ನೀಡಿರುತ್ತಾರೆ. ಕಾರಣ ಜಮೀನು ಸರ್ವೇ ನಂ:65/ಟ ಮತ್ತು 65/ಠ ಜಮೀನಗಳು ಏಕತ್ರ ಕುಟುಂಬದ ಜಮೀನು ಆಸ್ತಿಗಳಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

9. 1 ಮತ್ತು 2ನೇ ಪ್ರತಿವಾದಿಯರು ಮುಂದುವರೆದು ಸದರಿ ದಾವಾ ಆಸ್ತಿಗಳ ಪೈಕಿ ಜಮೀನು ಸರ್ವೇ ನಂ:52/ಎ ವಿಸ್ತೀರ್ಣ 07-ಎಕರೆ 13-ಗುಂಟೆ ಆಸ್ತಿಯನ್ನು ತಮಗೆ ತಿಳಿಯದಂತೆ 3ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ವರ್ಗಾವಣೆ ಮಾಡಿಕೊಂಡಿರುತ್ತಾನೆ ಮತ್ತು ಸದರಿ ಜಮೀನನ್ನು ಕಳೆದ 25 ವರ್ಷಗಳಿಂದಲೂ ಆಸ್ತಿಯ ಉಪಭೋಗ ವಹಿವಾಟು ಮಾಡುತ್ತಾ ಅದರಿಂದ ಬಂದಿರುವ ಉತ್ಪನ್ನದಲ್ಲಿ ಸೋಲಾಪುರದಲ್ಲಿಯ ಮಂಗಳವಾರಪೇಟದಲ್ಲಿ ಸಿಟಿ ಸರ್ವೇ ನಂ:2175/ಎ-3 ರಲ್ಲಿಯ 2ನೇ ಮಹಡಿ ಪ್ಲ್ಯಾಟ್ ನಂ:5 ನ್ನು ತನ್ನ ಹೆಸರಿನಲ್ಲಿ ಹಾಗೂ ಸೋಲಾಪುರ ವ್ಯಾಪ್ತಿಯಲ್ಲಿ ಬರುವ ಲಕ್ಷ್ಮಿ ನಗರದ ಹತ್ತೂರು ವಸತಿಯಲ್ಲಿ ನಿವೇಶನ ಸಂಖ್ಯೆ:229 ನ್ನು ತನ್ನ ಹೆಂಡತಿ ಹೆಸರಿನಲ್ಲಿ ಖರೀದಿಸಿರುತ್ತಾನೆ. ಕಾರಣ ಸದರಿ ಆಸ್ತಿಗಳು ಕೂಡ ಏಕತ್ರ ಕುಟುಂಬದ

ಆಸ್ತಿಗಳಾಗಿರುತ್ತವೆ ಎಂದು ತಿಳಿಸಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ಮುಂದುವರೆದು ದಾವಾ ಮನೆಯ ಆಸ್ತಿಸಂಖ್ಯೆ 15/1 ಇದು ನಾದುರಸ್ತಿ ಸ್ಥಿತಿಯಲ್ಲಿದ್ದು ಅದನ್ನು 1 ಮತ್ತು 2 ನೇ ಪ್ರತಿವಾದಿಯರು ಹಣ ಹೂಡಿ ಹೊಸ ಮನೆಯನ್ನಾಗಿ ನಿರ್ಮಿಸಿದ್ದು ಅದನ್ನೂ ಸಹ 3 ನೇ ಪ್ರತಿವಾದಿಯೇ ಅನುಭವಿಸುತ್ತಿದ್ದಾನೆ ಮತ್ತು ಈ ದಾವೆಯನ್ನು 3 ನೇ ಪ್ರತಿವಾದಿಯು ವಾದಿಯ ಕಡೆಯಿಂದ ಸಲ್ಲಿಸುವ ವ್ಯವಸ್ಥೆ ಮಾಡಿರುತ್ತಾನೆಂದು ತಿಳಿಸಿರುತ್ತಾರೆ.

10. ಸದರಿ ಪ್ರತಿವಾದಿಯರು ಮುಂದುವರೆದು ವಾದಿಯ ದಾವೆಯು ಕಾಲಪರಿಮಿತಿಯಲ್ಲಿ ಬರಲಾರದು ಹಾಗು 4 ರಿಂದ 6 ನೇ ಪ್ರತಿವಾದಿಯರು 1956 ಕ್ಕಿಂತ ಮುಂಚೆಯೇ ಜನಿಸಿರುವುದರಿಂದ ದಾವಾದ ಆಸ್ತಿಗಳಲ್ಲಿ ಅವರಿಗೆ ಯಾವುದೇ ಹಕ್ಕು ಇರಲಾರದು, ಕಾರಣ ವಾದಿಯ ದಾವೆಯನ್ನು ಖರ್ಚುಸಹಿತ ಕಿತ್ತಿಹಾಕಲು ವಿನಿಂತಿಸಿರುತ್ತಾರೆ.

**11. 3 ನೇ ಪ್ರತಿವಾದಿಯ ಪ್ರತಿವಾದಪತ್ರದ ಸಂಕ್ಷಿಪ್ತ ವಿವಾರಣೆ :**

3 ನೇ ಪ್ರತಿವಾದಿ ತನ್ನ ಪ್ರತಿವಾದಪತ್ರದಲ್ಲಿ ವಾದಪತ್ರದ ಸಂಗತಿಗಳನ್ನು ಅಲ್ಲಗಳೆಯುತ್ತಾ ಈ ದಾವಾದ ಆಸ್ತಿಗಳು ತಮ್ಮ ತಂದೆ ಬಸಯ್ಯನ ಜೀವಿತದ ಅವಧಿಯಲ್ಲಿ ಪಾಲು ವಾಟ್ನಿಯಾಗಿದ್ದು, ಆ ಪ್ರಕಾರ ಈಗಾಗಲೇ ಕಬ್ಜೆ ವಹಿವಾಟಿಯಲ್ಲಿ ಇರುತ್ತವೆ ಮತ್ತು ತಮ್ಮ ತಂದೆ ಬಸಯ್ಯ ಮೃತಪಟ್ಟ ನಂತರ ವಾದಿಯ ಎಲ್ಲ ರೀತಿಯ ಜೋಪಾನ-ಜತನವನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಕಾರಣ 4 ರಿಂದ 6 ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಪಾಲು ಕೇಳಲು ಮುಂದೆ ಬಂದಿರುವುದಿಲ್ಲ, ದಾವಾ ಆಸ್ತಿಗಳ ಮೌಲ್ಯವು ಪ್ರತಿ ಎಕರೆಗೆ ರೂ.8,00,000/- ಬೆಲೆ ಬಾಳುತ್ತಿದ್ದು ಕಾರಣ ಈ ನ್ಯಾಯಾಲಯಕ್ಕೆ ದಾವೆಯನ್ನು ವಿಚಾರಣೆ ಮಾಡುವ ಅಧಿಕಾರವ್ಯಾಪ್ತಿ ಇರುವುದಿಲ್ಲ, ಹಾಗೂ ವಾದಿಯು

ಸರಿಯಾಗಿ ನ್ಯಾಯಾಲಯದ ಶುಲ್ಕವನ್ನು ಭರಿಸಿರುವುದಿಲ್ಲ ಕಾರಣ ದಾವೆಯನ್ನು ಖರ್ಚುಸಹಿತ ವಜಾಗೊಳಿಸಲು ವಿನಂತಿಸಿರುತ್ತಾರೆ.

**12.** 4 ರಿಂದ 6 ನೇ ಪ್ರತಿವಾದಿಯರು 3 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ಅಂಶಗಳನ್ನೇ ಅಳವಡಿಸಿಕೊಂಡಿರುತ್ತಾರೆ.

**13.** ವಾದ ಹಾಗು ಪ್ರತಿವಾದ ಪತ್ರಗಳ ಹಾಗೂ ದಾವೆಯ ಪಕ್ಷಗಾರರು ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಮೊದಲಿನ ಪೀಠಾಸೀನಾ ಧಿಕಾರಿಗಳು ಈ ಕೆಳಗಿನಂತ ವಿವಾದಾಂಶಗಳನ್ನು ರಚಿಸಿರುತ್ತಾರೆ.

## ವಿವಾದಾಂಶಗಳು

**1) Whether plaintiff proves that suit properties are ancestral properties of the parties to the suit?**

**2) Whether defendant No.1 and 2 prove that suit lands bearing Sy.No.65/Ta and 65/Tha are self acquired properties of defendant No.1?**

**3) Whether the suit bad for non-joinder of properties i.e., plot No.229 in Sy.No.262 situated at Solapur?**

**4) Whether plaintiff is entitled for the reliefs as sought for?**

**5) What order and decree?**

**ADDITIONAL ISSUES**

1. **Whether Defendant No.3 proves that the partition had already taken place during lifetime of Basayya Hiremath?**
2. **Whether the suit is properly valued and the court fee paid is sufficient?**
3. **Whether this court has got pecuniary jurisdiction to try this suit?**

**14.** ವಾದಿಯು ತನ್ನ ದಾವೆಯನ್ನು ಸಾಭೀತುಪಡಿಸುವ ನಿಟ್ಟಿನಲ್ಲಿ ಮುಖ್ಯ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಮೂಲಕ ಸಲ್ಲಿಸಿ ಪಿ.ಡಬ್ಲ್ಯೂ-1 ಎಂದು ಸಾಕ್ಷಿ ನುಡಿದು, ತಾನು ಹಾಜರುಪಡಿಸಿದ ದಾಖಲೆಗಳನ್ನು ನಿಪಿ-1 ರಿಂದ 12 ಎಂದು ಗುರುತಿಸಿಕೊಂಡಿರುತ್ತಾರೆ.

**15.** ಅದರಂತೆ 1 ಮತ್ತು 2 ನೇ ಪ್ರತಿವಾದಿಯರ ಪರವಾಗಿ 1 ನೇ ಪ್ರತಿವಾದಿಯು ತನ್ನ ಮುಖ್ಯ ಸಾಕ್ಷಿಯ ಪ್ರಮಾಣಪತ್ರವನ್ನು ಸಲ್ಲಿಸಿ ಡಿಡಬ್ಲೂ-1 ಎಂದು ಸಾಕ್ಷಿ ನುಡಿದು ತಾನು ಹಾಜರುಪಡಿಸಿದ ದಾಖಲೆಗಳನ್ನು ನಿಡಿ-1 ರಿಂದ 22 ಎಂದು ನಿ ಶಾನೆಗೊಳಪಡಿಸಿಕೊಂಡಿರುತ್ತಾನೆ.

**16.** 3 ನೇ ಪ್ರತಿವಾದಿಯು ತನ್ನ ಮುಖ್ಯ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಡಿ.ಡಬ್ಲ್ಯೂ-2 ಎಂದು ಸಾಕ್ಷಿ ನುಡಿದು ತಾನು ಹಾಜರುಪಡಿಸಿದ ಕಾಗದಪತ್ರಗಳನ್ನು ನಿಡಿ-23 ರಿಂದ ನಿಡಿ-29 ಎಂದು ಗುರುತಿಸಿಕೊಂಡಿರುತ್ತಾರೆ.

**17.** 5 ನೇ ಪ್ರತಿವಾದಿಯು ತನ್ನ ಮುಖ್ಯ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ, ಡಿ.ಡಬ್ಲೂ-3 ಎಂದು ಸಾಕ್ಷಿ ನುಡಿದಿದ್ದು ಆದರೆ ತನ್ನ ಪರವಾಗಿ ಯಾವುದೇ ದಾಖಲೆಗಳನ್ನು ನಿಶಾನೆಗೆ ಒಳಪಡಿಸಿಕೊಂಡಿರುವುದಿಲ್ಲ.

**18.** ವಾದಿ ಮತ್ತು ಪ್ರತಿವಾದಿಯರ ಪರ ವಕೀಲರ ವಾದ-ವಿವಾದಗಳನ್ನು ಆಲಿಸಿದ ನಂತರ, ನಿಶಾನೆಗೂಳಪಟ್ಟ ದಾಖಲೆಗಳನ್ನು ಹಾಗು ಮೌಖಿಕ ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರ, ಮೇಲ್ಕಂಡ ವಿವಾದಾಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ವಿವಾದಾಂಶ ನಂ.1: ಭಾಗಶಃ ಸಕಾರಾತ್ಮಕವಾಗಿ**

**ವಿವಾದಾಂಶ ನಂ.2: ಸಕಾರಾತ್ಮಕವಾಗಿ**

**ವಿವಾದಾಂಶ ನಂ.3: ನಕಾರಾತ್ಮಕವಾಗಿ**

**ವಿವಾದಾಂಶ ನಂ.4: ಭಾಗಶಃ ಸಕಾರಾತ್ಮಕವಾಗಿ**

**ಹೆಚ್ಚುವರಿ ವಿವಾದಾಂಶ ನಂ.1: ನಕಾರಾತ್ಮಕವಾಗಿ**

**ಹೆಚ್ಚುವರಿ ವಿವಾದಾಂಶ ನಂ.2: ಸಕಾರಾತ್ಮಕವಾಗಿ**

**ಹೆಚ್ಚುವರಿ ವಿವಾದಾಂಶ ನಂ.3: ಸಕಾರಾತ್ಮಕವಾಗಿ**

**ವಿವಾದಾಂಶ ನಂ.5: ಈ ಕೆಳಗಿನ ಕಾರಣಗಳ ಆಧಾರದ ಮೇಲೆ ಮಾಡಿದ ಅಂತಿಮ ಆದೇಶದಂತೆ**

## ಕಾರಣಗಳು

**19.** **ವಿವಾದಾಂಶ ನಂ.1 ಮತ್ತು 2** : ಸದರಿ ವಿವಾದಾಂಶಗಳ ಚರ್ಚೆಯಲ್ಲಿ ಸಂಗತಿಗಳು ಹಾಗೂ ದಾಖಲೆಗಳು ಪುನರಾವರ್ತನೆಯಾಗುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**20.** ವಾದಿಯು ತನ್ನ ದಾವೆಯನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ತನ್ನ ಮುಖ್ಯ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಪಿ.ಡಬ್ಲ್ಯೂ-1 ಎಂದು ಸಾಕ್ಷಿ ನುಡಿದಿರುತ್ತಾಳೆ. ಸದರಿ ಮುಖ್ಯ ಸಾಕ್ಷ್ಯ ಪ್ರಮಾಣಪತ್ರದಲ್ಲಿ ವಾದಪತ್ರದಲ್ಲಿ ತಿಳಿಸಿದ ಸಂಗತಿಗಳನ್ನೇ ಪುನರುಚ್ಚರಿಸಿರುತ್ತಾಳೆ. ವಾದಿಯು ಹಾಜರುಪಡಿಸಿದ ಕಾಗದಪತ್ರಗಳನ್ನು ಪರಿಶೀಲಿಸಿದಾಗ ಭೂನ್ಯಾಯ ಮಂಡಳಿ ಅಫಜಲಪೂರ ಇವರು ಕ್ರಮ ಸಂಖ್ಯೆ ಐ.ಎನ್.ಡಿ/326/1978-79 ರ ಪ್ರಕಾರ ದಿನಾಂಕ **15-12-1981** ರಂದು ದಾವಾ ಆಸ್ತಿ ಪೈಕಿ ಜಮೀನು ಸರ್ವೇ ನಂ.52 ರಲ್ಲಿ 14-ಎಕರೆ 26-ಗುಂಟೆ ಆಸ್ತಿಗೆ ವಾದಿಯ ಗಂಡನಾದ ಬಸಯ್ಯ ತಂದೆ ರುದ್ರಯ್ಯನು ಅಧಿಭೋಗದಾರನೆಂದು ನಿರ್ಣಯಿಸಿ ದಿನಾಂಕ 18-07-1989 ರಂದು ಕ್ರಮಸಂಖ್ಯೆ: ಕಂದಾಯ-ಇನಾಮ್: 1978-79/326 ರ ಪ್ರಕಾರ ಸದರಿ ಜಮೀನಿಗೆ ವಾದಿಯ ಗಂಡನಾದ ಬಸಯ್ಯನ ಹೆಸರು ನೋಂದಾಯಿಸಿರುವುದು ಬಗ್ಗೆ ನಿಪಿ-1 ಮತ್ತು 2 ರಿಂದ ತಿಳಿದು ಬರುತ್ತದೆ. ಸರ್ವೇ ನಂ. 15/1 ವಿಸ್ತೀರ್ಣ 14 ಎಕರೆ 26 ಗುಂಟೆ ಆಸ್ತಿಯು ಮೊದಲು ಮಲ್ಲಿಕಾರ್ಜುನ ದೇವರ ಹೆಸರಿನ ಮೇಲೆ ಇದ್ದು ಅನಂತರ ಸದರಿ ಜಮೀನು 3 ನೇ ಪ್ರತಿವಾದಿಯಾದ ಮಲ್ಲಿನಾಥನಿಗೆ 07-ಎಕರೆ 13-ಗುಂಟೆ ಹಾಗು ವಾದಿಯ ಗಂಡನ ಸಹೋದರನಾದ ಮಡಿವಾಳಯ್ಯ ತಂದೆ ರುದ್ರಯ್ಯ ಈತನಿಗೆ 7 ಎಕರೆ 13 ಗುಂಟೆ ವಾಟ್ನಿ ಪ್ರಕಾರ ವಿಭಾಗವಾಗಿರುವುದು ನಿ.ಪಿ.3 ಎಂದು

ಹಾಜರುಪಡಿಸಿದ 1991-92 ರ ಸಾಲಿನ ಪಹಣಿ ಪತ್ರದಲ್ಲಿ ನಮೂದು ಇರುತ್ತದೆ. ಸದರಿ 3ನೇ ಪ್ರತಿವಾದಿ ತನ್ನ ಹೆಸರಿಗೆ ಇರುವ 7-ಎಕರೆ 13-ಗುಂಟೆ ಆಸ್ತಿಯಲ್ಲಿ ಅರ್ಧಭಾಗದ ಆಸ್ತಿಯನ್ನು ತನ್ನ ಮಗನಾದ ಬಸವರಾಜನಿಗೆ ಬಿಟ್ಟುಕೊಟ್ಟಿರುವುದು ನಿ.ಪಿ-4 ಮತ್ತು 5 ಎಂದು ಹಾಜರುಪಡಿಸಿದ ಪಹಣಿ ಪತ್ರಿಕೆಗಳಿಂದ ಕಂಡುಬರುತ್ತದೆ. ನಿಪಿ-6 ಎಂದು ಹಾಜರುಪಡಿಸಿದ ದಾವಾ ಆಸ್ತಿ ಸಂಖ್ಯೆ-65/ಟ ವಿಸ್ತೀರ್ಣ 04-ಎಕರೆ 38-ಗುಂಟೆ ಆಸ್ತಿಯ 2011-12 ರ ಸಾಲಿನ ಪಹಣಿ ಪತ್ರಿಕೆಯಲ್ಲಿ 1 ನೇ ಪ್ರತಿವಾದಿಯ ಹೆಸರು ಆಸ್ತಿಯ ಕಬ್ಜೆ ಹಾಗು ಸ್ವಾಧೀನದಾರರ ಕಾಲಂನಲ್ಲಿ ನಮೂದು ಇರುತ್ತದೆ. ನಿಪಿ-7 ಮತ್ತು 8 ಇವು ದಾವಾ ಮನೆಯ ಆಸ್ತಿ ಸಂಖ್ಯೆ:15/1 ರ ಕರ ಪಾವತಿ ರಸೀದಿ ಹಾಗು ಕರಾಕರಣೆ ಬೇಡಿಕೆ ರಜಿಸ್ಟರದ ಪ್ರತಿ ಇದ್ದು ಅದರಲ್ಲಿ ಮಾಲೀಕ ಮತ್ತು ಭೋಗವಟೆದಾರ ಕಾಲಂನಲ್ಲಿ ವಾದಿಯ ಗಂಡನಾದ ಬಸಯ್ಯ ತಂದೆ ರುದ್ರಯ್ಯನ ಹೆಸರು ನಮೂದು ಇರುತ್ತದೆ. ನಿಪಿ-9 ಮತ್ತು 10 ಇವುಗಳು 3 ನೇ ಪ್ರತಿವಾದಿಗೆ 1 ನೇ ವಾದಿ ಕಳುಹಿಸಿದ ಅಂಚೆ ಪತ್ರವಾಗಿರುತ್ತದೆ. ನಿಪಿ-11 ಹಕ್ಕು ಬದಲಾವಣೆ ರಜಿಸ್ಟರದ ದೃಡೀಕೃತ ಪ್ರತಿಯಾಗಿದ್ದು ಸರ್ವೇ ನಂ.65 ರ ಪೈಕಿ ತಲಾ 04-ಎಕರೆ 38-ಗುಂಟೆ ಆಸ್ತಿಯನ್ನು 1 ನೇ ಮತ್ತು 2 ನೇ ಪ್ರತಿವಾದಿಯರಿಗೆ ಸರಕಾರಿ ಜಮೀನನ್ನು ಸಕ್ರಮವಾಗಿ ನೀಡಿದ ಕುರಿತು ತಹಸೀಲ್ದಾರವರು ದಿನಾಂಕ:08.04.1993 ರಂದು ಮಾಡಿದ ಆದೇಶವಾಗಿದ್ದು ದಾಖಲಾತಿಯಿಂದ ತಿಳಿದು ಬರುತ್ತದೆ.

**21.** ನಿಪಿ-12 ರಲ್ಲಿ ದಾವಾ ಆಸ್ತಿ ಪೈಕಿ ಮನೆ ಸಂಖ್ಯೆ-15/1 ರಲ್ಲಿ 1 ರಿಂದ 3 ನೇ ಪ್ರತಿವಾದಿಯರು ಆಸ್ತಿಯನ್ನು ಹಂಚಿಕೊಂಡು ಕಾಂಪೌಂಡ ಗೋಡೆ ಕಟ್ಟಿದ

ಖರ್ಚು ರೂ.80,000/- ಗಳನ್ನು 3 ನೇ ವಾದಿಯ ಕಡೆಯಿಂದ 1 ನೇ ವಾದಿಯು ಪಡೆದಿರುವುದಾಗಿ ಬರೆದುಕೊಟ್ಟ ರಸೀದಿ ಪತ್ರವಾಗಿರುತ್ತದೆ.

**22.** ಸದರಿ ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ದಾವಾದ ಆಸ್ತಿಗಳ ಪೈಕಿ ಜಮೀನು ಸರ್ವೇ ನಂ.52/ಎ ವಿಸ್ತೀರ್ಣ 07-ಎಕರೆ 13-ಗುಂಟೆ ಇದು ವಾದಿಯ ಗಂಡನಾದ ಬಸಯ್ಯ ತಂದೆ ರುದ್ರಯ್ಯನಿಗೆ ಭೂನ್ಯಾಯ ಮಂಡಳಿಯಿಂದ ನೀಡಿದ ಜಮೀನು ಆಗಿರುತ್ತದೆ ಎಂಬುದು ನಿಪಿ-1 ಮತ್ತು 2 ರ ದಾಖಲೆಗಳಿಂದ ಕಂಡುಬರುತ್ತದೆ. 1ನೇ ಪ್ರತಿವಾದಿ ಹಾಜರುಪಡಿಸಿದ ನಿ.ಡಿ.11, 12, 13, 14 ಗಳನ್ನು ಪರಿಶೀಲಿಸಿದಾಗ ಸದರಿ ಜಮೀನು ಸರ್ವೇ ನಂ:52 ಇದು ಒಟ್ಟು ವಿಸ್ತೀರ್ಣ 14-ಎಕರೆ ಆಸ್ತಿ ಇದ್ದು, 1968-69 ರಿಂದ 1987-88 ರ ವರೆಗೆ ಮಲ್ಲಿಕಾರ್ಜುನ ಗುಡಿ ಇನಾಮ ಆಸ್ತಿಯಾಗಿರುತ್ತದೆ ಎಂದು ಆಸ್ತಿಯ ಉತಾರೆಯ ಕಾಲಂ ನಂ:9 ರಲ್ಲಿ ನಮೂದನೆ ಇದ್ದು, ಕಾಲಂ ನಂ:12 ರಲ್ಲಿ ವಾದಿಯ ಗಂಡ ಬಸಯ್ಯ ಹಾಗೂ ಆತನ ಸಹೋದರ ಮಡಿವಾಳಯ್ಯನ ಹೆಸರು ವ್ಯವಸಾಯಗಾರರು ಎಂದು ನಮೂದನೆ ಇರುವುದು ದಾಖಲೆಗಳಿಂದ ಕಂಡುಬರುತ್ತದೆ.

**23.** ಸರ್ವೆ ನಂ:52 ಕ್ಕೆ ಸಂಬಂಧಿಸಿದಂತೆ 1988-89 ರಿಂದ 1992-93 ನೇ ಸಾಲಿನ ಉತಾರೆಯನ್ನು 1ನೇ ಪ್ರತಿವಾದಿಯು ಹಾಜರುಪಡಿಸಿದ್ದು ಅದನ್ನು ನಿ.ಡಿ.15 ಎಂದು ಗುರುತಿಸಿದ್ದು, ಸದರಿ ದಾಖಲೆಯಲ್ಲಿ ವಾಟ್ನಿ ಪ್ರಕಾರ 3ನೇ ಪ್ರತಿವಾದಿಗೆ ಹಾಗೂ ಬಸಯ್ಯನ ಸಹೋದರರನಾದ ಮಡಿವಾಳಯ್ಯನಿಗೆ ತಲಾ 07-ಎಕರೆ 13-ಗುಂಟೆ ಆಸ್ತಿ ಹಂಚಿಕೆಯಾಗಿರುತ್ತದೆ ಎಂದು ನಮೂದನೆ ಇರುತ್ತದೆ. 3ನೇ ಪ್ರತಿವಾದಿಯು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ಈಗಾಗಲೇ 1 ರಿಂದ 3ನೇ ಪ್ರತಿವಾದಿಯರ ನಡುವೆ ಪಾಲುವಾಟ್ನಿ ಆಗಿರುತ್ತದೆ ಎಂದು ತನ್ನ

ಪ್ರತಿವಾದ ಪತ್ರದಲ್ಲಿ ತಿಳಿಸಿದ್ದು, ಆದರೆ ಸದರಿ ಪಾಲುವಾಟ್ನಿ ಸಮಯದಲ್ಲಿ ಉಳಿದ ಹಿಸ್ಸೆದಾರರಿಗೆ ಮನೆತನದ ಯಾವ ಆಸ್ತಿ ಹಂಚಿಕೆಯಾಗಿರುತ್ತದೆ ಎಂದು ತೋರಿಸಲು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದು ಅಲ್ಲದೆ ವಾದಿ ಪರ ವಕೀಲರು ಪಾಟಿಸವಾಲಿಗೆ ಒಳಪಡಿಸಿದಾಗ "ಮಾರ್ಚ್ 1991 ರಿಂದ ಜುಲೈ 1995 ರವರೆಗೆ ಸೌದಿ ಅರೇಬಿಯಲ್ಲಿ ವಾಸವಿದ್ದು ಮೊದಲಿನಿಂದಲೂ ನಾನು ಮತ್ತು 1 ನೇ ಪ್ರತಿವಾದಿ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದರಿಂದ, ನನ್ನ ತಂದೆಯವರೇ ದಾವಾದ ಜಮೀನು ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು, ನನ್ನ ತಂದೆ ಹಾಗು ಚಿಕ್ಕಪ್ಪ ಸೇರಿ ಮೂಲ ಆಸ್ತಿಯಲ್ಲಿ ಸ್ವಲ್ಪ ಭಾಗದ ಆಸ್ತಿಗಳನ್ನು ಸಾಗುವಳಿ ಮಾಡುತ್ತಿದ್ದರು, ವಾದಿಯು ತೋರಿಸಿದ ದಾವಾದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ, ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಕಾಯ್ದೆಬದ್ಧ ಪಾಲು ಇರುತ್ತದೆ, ನನ್ನ ತಂದೆಯ ಜೀವಿತ ಅವಧಿಯಲ್ಲಿ ಪಾಲು ವಾಟ್ನಿ ಮಾಡಿ ಕೊಟ್ಟಿರುತ್ತಾನೆ ಎಂಬುವ ಕುರಿತು ಯಾವುದೇ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದು ಉತ್ತರಿಸಿರುತ್ತಾನೆ.

**24.** 1 ಮತ್ತು 2 ನೇ ಪ್ರತಿವಾದಿಯರ ಪರ ವಕೀಲರು ಡಿ.ಡಬ್ಲೂ-2 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ " **ದಾವಾ ಆಸ್ತಿಯ ಉತಾರೆಯಾದ ನಿ.ಡಿ-15 ರಲ್ಲಿ ತನ್ನ ಹೆಸರು ಹೇಗೆ ಬಂದಿತು ಎಂಬುದು ತನಗೆ ಗೊತ್ತಿಲ್ಲ"** ಎಂದು ಉತ್ತರಿಸಿರುತ್ತಾರೆ. ಮತ್ತು ದಾವಾ ಆಸ್ತಿ ಸರ್ವೆ ನಂ.52/ಎ ಹಾಗು ಮನೆ ನಂಬರ 15/1 ಇವುಗಳು ಬಸಯ್ಯ ತಂದೆ ರುದ್ರಯ್ಯ (ಪ್ರತಿವಾದಿಯರ ತಂದೆ) ಇವರಿಗೆ ಸಂಬಂಧಿಸಿರುತ್ತದೆಂದು ತನ್ನ ಸಾಕ್ಷ್ಯದಲ್ಲಿ ಉತ್ತರಿಸಿರುತ್ತಾರೆ. ಸದರಿ ಸಾಕ್ಷಿದಾರನ ಹೇಳಿಕೆಗಳನ್ನು ಹಾಗು ದಾಖಲೆಗಳನ್ನು ಪರಿಶೀಲಿಸಿದಾಗ ದಾವಾ ಜಮೀನು ಆಸ್ತಿ ನಂಬರ 52/ಎ ವಿಸ್ತೀರ್ಣ 07-ಎಕರೆ

13-ಗುಂಟೆ ಮತ್ತು ಮನೆ ಆಸ್ತಿ ನಂಬರ 15/1 ಇವುಗಳು ವಾದಿಯ ಗಂಡನಾದ ಬಸಯ್ಯ ತಂದೆ ರುದ್ರಯ್ಯನ ಕಡೆಯಿಂದ ವಾದಿ ಮತ್ತು ಪ್ರತಿವಾದಿಯರಿಗೆ ಬಂದ ಆಸ್ತಿಗಳಾಗಿರುತ್ತವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. 3 ನೇ ಪ್ರತಿವಾದಿ ಹೇಳುವಂತೆ ತನ್ನ ತಂದೆಯ ಜೀವಿತದ ಅವಧಿಯಲ್ಲಿ ತನಗೆ ಜಮೀನು ಸರ್ವೆ ನಂ.52/ಅ ಪಾಲು ವಾಟ್ನಿ ಪ್ರಕಾರ ಬಂದಿರುತ್ತದೆ ಎಂದು ತನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿದ್ದು ಆದರೆ ತನ್ನ ಪಾಟೀ ಸವಾಲಿನಲ್ಲಿ **"ತನಗೆ ಹಾಗು ಪ್ರತಿವಾದಿಯರಿಗೆ ದಾವಾಸ್ತಿಗಳಲ್ಲಿ ಪಾಲು ಇರುತ್ತದೆ"** ಎಂದು ಸ್ಪಷ್ಟವಾಗಿ ತಿಳಿಸಿರುತ್ತಾನೆ. ಅದು ಅಲ್ಲದೆ **"1991-92 ರಲ್ಲಿ ತನ್ನ ಹೆಸರು ದಾವಾಸ್ತಿಯ ಉತಾರೆಯಲ್ಲಿ ಯಾವ ಆಧಾರದ ಮೇಲೆ ನಮೂದಾಗಿರುತ್ತದೆಂದು ತನಗೆ ಗೊತ್ತಿಲ್ಲವೆಂದು"** ಉತ್ತರಿಸಿರುತ್ತಾನೆ. ಕೇವಲ ಆಸ್ತಿಯ ಉತಾರೆಯಲ್ಲಿ ಹೆಸರು ನಮೂದು ಆದ ಮಾತ್ರಕ್ಕೆ ಆಸ್ತಿಯ ಒಡೆತನದ ಹಕ್ಕು ಹಾಗು ಹಿತಾಸಕ್ತಿಯನ್ನು 3 ನೇ ಪ್ರತಿವಾದಿಯು ಪಡೆಯಲಾರನು ಕಾರಣ ದಾವಾ ಸರ್ವೆ ನಂ.52/ಎ ಇದು ವಾದಿಯ ಗಂಡನಾದ ಬಸಯ್ಯ ತಂದೆ ರುದ್ರಯ್ಯನಿಂದ ದಾವೆಯ ಪಕ್ಷಗಾರರಿಗೆ ಬಂದಂತಹ ಆಸ್ತಿಯಾಗಿದ್ದು ಹಾಗು ದಾವಾ ಮನೆ ಸಂಖ್ಯೆ-15/1 ಇದು ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆಂಬುದು ದಾವೆಯ ವಿಷಯ ವಸ್ತು ಹಾಗು ಕಾಗದಪತ್ರಗಳ ಆಧಾರದ ಮೇಲೆ ಕಂಡುಬರುತ್ತದೆ. ಕಾರಣ ವಿವಾದಾಂಶ ನಂ.1 ನ್ನು **ಭಾಗಶಃ ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**25.** ದಾವಾಸ್ತಿಗಳ ಪೈಕಿ ಬಡದಾಳ ಗ್ರಾಮದ ಜಮೀನು ಹಿಸ್ಸೆ ನಂ.65/ಟ ಮತ್ತು 65/ಠ ಈ ಆಸ್ತಿಗಳು ಕೂಡ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆಂದು ವಾದಿಯು ತನ್ನ ಮುಖ್ಯ ಸಾಕ್ಷಿ ಪ್ರಮಾಣಪತ್ರದಲ್ಲಿ ತಿಳಿಸಿರುತ್ತಾಳೆ. ಈ ಕುರಿತು ಪ್ರತಿವಾದಿ

1 ಮತ್ತು 2 ರವರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ಆಸ್ತಿಗಳನ್ನು ದಿನಾಂಕ 25-01-1992 ರಂದು 1 ಮತ್ತು 2 ನೇ ಪ್ರತಿವಾದಿಯರಿಗೆ ಸರಕಾರವು ಕ್ರಮವಾಗಿ ಮಾಜಿ ಸೈನಿಕ ಹಾಗು ಕೃಷಿ ಕೂಲಿ ಕಾರ್ಮಿಕ ಎಂಬುವ ಆಧಾರದ ಮೇಲೆ ನೀಡಿರುವುದು ನಿ.ಡಿ-1 ಮತ್ತು 2 ರಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ವಾದಿಪರ ವಕೀಲರು ಸದರಿ ಜಮೀನುಗಳನ್ನೂ ಕೂಡ ವಾದಿಯ ಗಂಡನಾದ ಬಸಯ್ಯ ಸಾಗುವಳಿ ಮಾಡುತ್ತಿದ್ದ, ಆತನೇ 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಸರಕಾರವು ಜಮೀನುಗಳನ್ನು ಮಂಜೂರು ಮಾಡಲು ವ್ಯವಸ್ಥೆ ಮಾಡಿರುತ್ತಾನೆ ಮತ್ತು ಸದರಿ ಜಮೀನುಗಳನ್ನು ವಾದಿಯ ಗಂಡ ತನ್ನ ಜೀವಿತಾವಧಿಯಲ್ಲಿ ಏಕತ್ರ ಕುಟುಂಬ ನಾತೆಯಿಂದ ಸಾಗುವಳಿ ಮಾಡುತ್ತಿದ್ದನು ಮತ್ತು 1 ನೇ ವಾದಿ 1968 ರಿಂದ 2006 ರವರೆಗೆ ತನ್ನ ವೃತ್ತಿಯ ಮೇರೆಗೆ ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುತ್ತಾ ಬಂದಿರುತ್ತಾನೆ. ಕಾರಣ ಸದರಿ ಜಮೀನುಗಳು ಸಹ ಪಿತ್ರಾರ್ಜಿತ ಆಸ್ತಿಗಳೆಂದು ಪರಿಗಣಿಸಬೇಕೆಂದು ವಾದಿಯು ತಿಳಿಸಿರುತ್ತಾರೆ. 1 ನೇ ಪ್ರತಿವಾದಿ 1968 ರಿಂದ 1983 ರವರೆಗೆ ಅನೇಕ ಸ್ಥಳಗಳಲ್ಲಿ ಸೇವೆ ಸಲ್ಲಿಸಿದ ಸಂಗತಿ ಹಾಗು 2 ನೇ ಪ್ರತಿವಾದಿ ಅರ್ಜುಣಗಿ ಗ್ರಾಮದಲ್ಲಿ ಕೃಷಿಕನಾದ ಸಂಗತಿ ದಾವೆಯ ಎರಡೂ ಪಕ್ಷಗಾರರ ಒಪ್ಪಿದ ಸಂಗತಿಯಾಗಿರುತ್ತದೆ. ಸದರಿ ಬಡದಾಳ ಗ್ರಾಮದ ಜಮೀನು ಸರ್ವೇ ನಂಬರ 65/ಟ ಹಾಗು 65/ಠ ರ ಜಮೀನುಗಳನ್ನು ನಿಡಿ-1 ಮತ್ತು 2 ರ ಪ್ರಕಾರ 1 ಮತ್ತು 2 ನೇ ಪ್ರತಿವಾದಿಯರಿಗೆ ನೀಡಿರುವುದು ನಿರ್ವಿವಿವಾದ ಸಂಗತಿ, ಆದರೆ ವಾದಿಯು ತನ್ನ ವಾದಪತ್ರದಲ್ಲಿ ಆರ್ಜುಣಗಿ ಗ್ರಾಮದ ಜಮೀನು ಸರ್ವೆ ನಂ.52/ಎ ಇದು ತನ್ನ ಗಂಡನಿಗೆ ಇನಾಮಿ ಜಮೀನು ಬಂದಿದ್ದು ಸದರಿ ಜಮೀನಿನ ಪೈಕಿ ಅರ್ಧ ಭಾಗದ ಜಮೀನು ವಾದಿಯ ಗಂಡ ಹಾಗು ಆತನ ಸಹೋದರ ಮಡಿವಾಳಪ್ಪ ಹಂಚಿಕೊಂಡಿದ್ದು ಅದೇ ರೀತಿ ಬಡದಾಳ ಗ್ರಾಮದ ಸರ್ವೆ

ನಂ.65/ಟ ಮತ್ತು 65/ಠ ಜಮೀನುಗಳು ಸಹ ಮನೆತನಕ್ಕೆ ನೀಡಿದ್ದು ಕಾರಣ ಅದರಲ್ಲಿಯೂ ಸಹ ವಾದಿ ಮತ್ತು ಪ್ರತಿವಾದಿಯರು ಸಮಾನವಾಗಿ ಹಿಸ್ಸೆಯನ್ನು ಹೊಂದಿರುತ್ತಾರೆಂದು ತಿಳಿಸಿರುತ್ತಾಳೆ. ಆದರೆ ಮುಖ್ಯ ಸಾಕ್ಷಿ ಪ್ರಮಾಣ ಪತ್ರದಲ್ಲಿ ಅರ್ಜುಣಗಿ ಗ್ರಾಮದ ಜಮೀನು ಸರ್ವೆ ನಂ.52/ಎ ವಿಸ್ತೀರ್ಣ 07-ಎಕರೆ 13-ಗುಂಟೆ ಆಸ್ತಿಯನ್ನು ತನ್ನ ಗಂಡನೇ 3 ನೇ ಪ್ರತಿವಾದಿಗೆ ನೀಡಿರುತ್ತಾನೆ ಮತ್ತು ಬಡದಾಳ ಗ್ರಾಮದ ಜಮೀನುಗಳನ್ನು 1 ಮತ್ತು 2 ನೇ ಪ್ರತಿವಾದಿಯರಿಗೆ ಸರಕಾರವು ನೀಡಿರುತ್ತದೆ ಎಂದು ತಿಳಿಸಿರುತ್ತಾಳೆ.

**26.** ಸದರಿ ದಾವಾ ಜಮೀನು ಸರ್ವೆ ನಂ.65/ಟ ಮತ್ತು 65/ಠ ಗಳ ಕುರಿತು ಪ್ರತಿವಾದಿ 1 ಮತ್ತು 2 ರವರು ಹಾಜರುಪಡಿಸಿದ ಕಾಗದಪತ್ರಗಳನ್ನು ಪರಿಶೀಲಿಸಿದಾಗ ಸದರಿ ಜಮೀನುಗಳು ಮೊದಲು ಸರಕಾರಿ ಗೈರಾಣಿ ಜಮೀನು ಇದ್ದವು ಎಂಬುದು ನಿಡಿ-17 ಎಂದು ಹಾಜರುಪಡಿಸಿದ ಉತಾರೆಯಿಂದ ಸ್ಪಷ್ಟವಾಗುತ್ತದೆ. ಆ ನಂತರ ಸದರಿ ಜಮೀನುಗಳ ಪೈಕಿ 04-ಎಕರೆ 38-ಗುಂಟೆ ಜಮೀನನ್ನು 1 ನೇ ಪ್ರತಿವಾದಿಗೆ ಹಾಗೂ 04-ಎಕರೆ 38-ಗುಂಟೆ ಜಮೀನನ್ನು 2 ನೇ ಪ್ರತಿವಾದಿಗೆ ನೀಡಿದ ಕುರಿತು ನಿ.ಡಿ-9 ಮತ್ತು 18 ಎಂದು ಹಾಜರುಪಡಿಸಿದ ಉತಾರೆಗಳಿಂದ ಸ್ಪಷ್ಟವಾಗುತ್ತದೆ.

**27.** ದಾವಾ ಆಸ್ತಿ ಪೈಕಿ ಸರ್ವೆ ನಂ.65/ಟ ಮತ್ತು 65/ಠ ಆಸ್ತಿಗಳನ್ನು ಸರಕಾರದವರು 1 ಮತ್ತು 2 ನೇ ಪ್ರತಿವಾದಿಯರಿಗೆ ಮಂಜೂರು ಮಾಡಿರುವುದನ್ನು 1 ಮತ್ತು 2 ನೇ ಪ್ರತಿವಾದಿಯರು ಪೂರಕ ದಾಖಲೆಗಳಿಂದ ಸಾಬೀತುಪಡಿಸಿರುತ್ತಾರೆ. ಆದರೆ ಸದರಿ ಜಮೀನುಗಳನ್ನೂ ಸಹ ವಾದಿಯ ಮನೆತನಕ್ಕೆ ನೀಡಿರುತ್ತಾರೆ ಅಂಬುವುದರ ಕುರಿತು ವಾದಿಯು ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ನೀಡಿರುವುದಿಲ್ಲ.

1 ನೇ ಪ್ರತಿವಾದಿಯ ಅನುಪಸ್ಥಿತಿಯಲ್ಲಿ ವಾದಿಯ ಗಂಡ ಸದರಿ ಜಮೀನನ್ನು ಉಳುಮೆ ಮಾಡುತ್ತಿದ್ದನು ಎಂಬುವ ಸಂಗತಿ ಸದರಿ ಜಮೀನುಗಳು ಸಹ ಏಕತ್ರ ಕುಟುಂಬದ ಜಮೀನುಗಳಾಗಿರುತ್ತವೆ ಎಂದು ಪೂರ್ವಭಾವನೆ ಮಾಡಲು ಕಾನೂನಿನ ಅಡಿಯಲ್ಲಿ ಅವಕಾಶ ಇರಲಾರದು. ಅದಲ್ಲದೆ ವಾದಿಯು ಸದರಿ ಜಮೀನುಗಳನ್ನು 1 ಮತ್ತು 2 ನೇ ಪ್ರತಿವಾದಿಯರಿಗೆ ಸರಕಾರವು ಮಂಜೂರು ಮಾಡಿದ್ದರ ಬಗ್ಗೆ ತನ್ನ ಸಾಕ್ಷ್ಯದಲ್ಲಿ ಒಪ್ಪಿಕೊಂಡಿರುತ್ತಾಳೆ. ಕಾರಣ ವಿವಾದಾಂಶ ನಂ. 2 ನ್ನು **ಸಕಾರಾತ್ಮಕ** ಎಂದು ಉತ್ತರಿಸಿದ್ದೇನೆ.

**28.** **ವಿವಾದಾಂಶ 3 :-** 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಪ್ರತಿವಾದಪತ್ರದಲ್ಲಿ 3 ನೇ ಪ್ರತಿವಾದಿಯು ಮನೆತನದ ಆಸ್ತಿಯಾದ ಸರ್ವೆ ನಂ. 52/ಎ ವಿಸ್ತೀರ್ಣ 07-ಎಕರೆ 13-ಗುಂಟೆ ಆಸ್ತಿಯ ವಹಿವಾಟು ಉಪಭೋಗ ಮಾಡುತ್ತಾ ಅದರಿಂದ ಬಂದ ಉತ್ಪನ್ನದಲ್ಲಿ 3 ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ಹಾಗು ತನ್ನ ಹೆಂಡತಿಯ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿಸಿರುತ್ತಾನೆ, ಕಾರಣ ಸದರಿ ಆಸ್ತಿಗಳಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಹಕ್ಕನ್ನು ಹೊಂದಿರುತ್ತಾರೆಂದು ತಮ್ಮ ಪ್ರತಿವಾದಪತ್ರದಲ್ಲಿ ತಿಳಿಸಿರುತ್ತಾರೆ. ಈ ಕುರಿತು 1 ಮತ್ತು 2 ಪ್ರತಿವಾದಿಯರು ಪೂರಕವಾದ ದಾಖಲೆ ಸಾಕ್ಷ್ಯಗಳನ್ನಾಗಲಿ ವ, 3 ನೇ ಪ್ರತಿವಾದಿಯ ಪಾಟೀ ಸವಾಲಿನಲ್ಲಿ ಯಾವುದೇ ಪೂರಕ ಹೇಳಿಕೆಯನ್ನಾಗಲಿ ಪಡೆದಿರುವುದಿಲ್ಲ, 3 ನೇ ಪ್ರತಿವಾದಿಯು ಸದರಿ ಆಸ್ತಿಗಳು ತನಗೆ ಹಾಗೂ ತನ್ನ ಹೆಂಡತಿಗೆ ಸಂಬಂಧಿಸಿದ್ದಿರುತ್ತದೆಂದು ಸಾಭೀತುಪಡಿಸಲು ಅವುಗಳ ಖರೀದಿ ಪತ್ರಗಳನ್ನು ನಿಪಿ-24 ಮತ್ತು ನಿಪಿ-28, 28ಎ ಎಂದು ಹಾಜರುಪಡಿಸಿರುತ್ತಾರೆ. ಸದರಿ ಆಸ್ತಿಗಳನ್ನು ಖರೀದಿಸಲು 3 ನೇ ಪ್ರತಿವಾದಿಗೆ ಸಾಕಷ್ಟು ಆದಾಯ ಇತ್ತು ಎಂಬುವ ಕುರಿತು ವಾದಿ ಮತ್ತು ಉಳಿದ ಪ್ರತಿವಾದಿಯರು ತಮ್ಮ ಸಾಕ್ಷಿಯಲ್ಲಿ

ಒಪ್ಪಿಕೊಂಡಿರುತ್ತಾರೆ. ಕಾರಣ ಸದರಿ ವಿವಾದಾಂಶ ನಂ.3 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

29. **ಹೆಚ್ಚುವರಿ ವಿವಾದಾಂಶ ನಂ-1** : 3ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ದಾವಾದ ಆಸ್ತಿಗಳು ತಮ್ಮ ತಂದೆಯ ಜೀವಿತದ ಅವಧಿಯಲ್ಲಿ 1 ರಿಂದ 3ನೇ ಪ್ರತಿವಾದಿಯ ನಡುವೆ ಪಾಲುವಾಟ್ನಿಯಾಗಿರುತ್ತವೆ ಎಂದು ತಿಳಿಸಿದ್ದು ಈ ಕುರಿತು ಪೂರಕ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಕೇವಲ ಆಸ್ತಿಗಳ ಉತಾರೆಯಲ್ಲಿ ಹೆಸರುಗಳು ನಮೂದು ಆದ ಮಾತ್ರಕ್ಕೆ ವಾದಿ - ಪ್ರತಿವಾದಿಯರ ನಡುವೆ ದಾವಾ ಆಸ್ತಿಗಳ ಕುರಿತು ಪಾಲುವಾಟ್ನಿಯಾಗಿರುತ್ತದೆ ಎಂದು ನಿರ್ಧರಿಸಲು ಬರಲಾರದು. ಕಾರಣ ಹೆಚ್ಚುವರಿ ವಿವಾದಾಂಶ ನಂ-1 ಕ್ಕೆ ನಕಾರಾತ್ಮಕ ಎಂದು ಉತ್ತರಿಸಿದ್ದೇನೆ.

30. **ಹೆಚ್ಚುವರಿ ವಿವಾದಾಂಶ ನಂ-2 ಮತ್ತು 3** : 3ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ದಾವಾದ ಆಸ್ತಿಗಳು ಪ್ರತಿ ಎಕರೆಗೆ 8 ಲಕ್ಷ ರೂಪಾಯಿ ಬೆಲೆ ಬಾಳುತ್ತಿದ್ದು ಕಾರಣ ಈ ನ್ಯಾಯಾಲಯಕ್ಕೆ ವಿಚಾರಣೆಯ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಹಾಗೂ ಸರಿಯಾದ ಕೋರ್ಟ್ ಶುಲ್ಕ ಭರಿಸಿರುವುದಿಲ್ಲ ಎಂದು ತಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಅಂಶಗಳನ್ನು ಸಾಭೀತುಪಡಿಸಲು 3ನೇ ಪ್ರತಿವಾದಿ ದಾವಾ ದಾಖಲಿಸುವ ದಿನದಂದು ಆಸ್ತಿಗಳ ಮೌಲ್ಯ ಎಷ್ಟು ಇತ್ತು ಅಂಬುವುದನ್ನು ತೋರಿಸಲು ಯಾವುದೇ ಪೂರಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿ ಪಾಲುವಾಟ್ನಿ ಕೇಳಿ ದಾವೆಯನ್ನು ಸಲ್ಲಿಸಿದ್ದರಿಂದ ಕರ್ನಾಟಕ ಕೋರ್ಟ್ ಶುಲ್ಕ ಕಾಯ್ದೆ ಕಲಂ:35(2) ರ ಅಡಿಯಲ್ಲಿ ಭರಿಸಿದ ಕೋರ್ಟ್ ಶುಲ್ಕ ಸರಿಯಾಗಿರುತ್ತದೆ ಎಂದು

ಪರಿಗಣಿಸಿ ಹೆಚ್ಚುವರಿ ವಿವಾದಾಂಶ ನಂ-2 ಮತ್ತು 3 ಕ್ಕೆ **ಸಕಾರಾತ್ಮಕ** ಎಂದು ಉತ್ತರಿಸಿದ್ದೇನೆ.

31. **ವಿವಾದಾಂಶ 4 :-** ದಾವಾಸ್ತಿಗಳ ಪೈಕಿ ಅರ್ಜುಣಗಿ ಗ್ರಾಮದ ಜಮೀನು ಆಸ್ತಿ ಸಂಖ್ಯೆ 52/ಎ ಹಾಗೂ ಮನೆ ಸಂಖ್ಯೆ 15/1 ಇವುಗಳನ್ನು ವಾದಿ ಮತ್ತು ಪ್ರತಿವಾದಿಯರ ಏಕತ್ರದಲ್ಲಿ ಬಿಟ್ಟು ವಾದಿಯ ಗಂಡ ಬಸಯ್ಯ ಮೃತಪಟ್ಟಿರುತ್ತಾನೆ. ಆದರೆ ಸದರಿ ಆಸ್ತಿಗಳ ಪೈಕಿ ಜಮೀನು ಸರ್ವೆ ನಂ.52/ಅ ಇದು ವಾದಿ ಮತ್ತು ಪ್ರತಿವಾದಿಯರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿರುವುದಿಲ್ಲ. ಕಾರಣ ಹಿಂದೂ ವಾರಸಾ ಕಾಯ್ದೆ ಕಲಂ.8 ರ ಪ್ರಕಾರ ವಾದಿ ಮತ್ತು ಪ್ರತಿವಾದಿಯರು ತಲಾ 1/7 ಹಿಸ್ಸೆಯನ್ನು ಹೊಂದಿರುತ್ತಾರೆ. ಅದರಂತೆ ಮನೆಯ ಆಸ್ತಿ ಸಂಖ್ಯೆ:15/1 ಇದು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ವಾದಿ ಹಾಗೂ 4 ರಿಂದ 6 ನೇ ಪ್ರತಿವಾದಿಯರು ತಲಾ 1/28 ಹಿಸ್ಸೆ ಹಾಗೂ 1 ರಿಂದ 3 ನೇ ಪ್ರತಿವಾದಿಯರು ತಲಾ 8/28 ನೇ ಹಿಸ್ಸೆಯನ್ನು ಪಡೆಯಲು ಅರ್ಹರು ಇರುತ್ತಾರೆ. ಕಾರಣ ವಿವಾದಾಂಶ ನಂ.4 ಕ್ಕೆ **ಭಾಗಶಃ ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

32. **ವಿವಾದಾಂಶ 5 :-** ವಿವಾದಾಂಶ ನಂ-1 ರಿಂದ 4 ಹಾಗೂ ಹೆಚ್ಚುವರಿ ವಿವಾದಾಂಶ ನಂ: 1 ರಿಂದ 3 ರಲ್ಲಿ ಚರ್ಚಿಸಿದ್ದರ ಫಲವಾಗಿ ಈ ಕೆಳಗಿನಂತೆ...

# **ಆದೇಶ**

**ವಾದಿಯ ದಾವೆಯನ್ನು ಭಾಗಶಃ ಪುರಸ್ಕರಿಸಲಾಗಿದೆ.**

**ದಾವಾದ ಆಸ್ತಿ ಪೈಕಿ ಅರ್ಜುಣಗಿ ಗ್ರಾಮದ ಜಮೀನು ಸರ್ವೆ ನಂ:52/ಎ ವಿಸ್ತೀರ್ಣ 07-ಎಕರೆ 13-ಗುಂಟೆ ಆಸ್ತಿಯಲ್ಲಿ ವಾದಿ 1/7 ಹಿಸ್ಸೆಯನ್ನು ಹಾಗೂ ಅರ್ಜುಣಗಿ ಗ್ರಾಮದ ಮನೆ ಸಂಖ್ಯೆ:15/1 ರಲ್ಲಿ 1/28 ಹಿಸ್ಸೆಯನ್ನು ಪಡೆಯಲು ಅರ್ಹಳು ಇರುತ್ತಾಳೆ.**

**ಪಾಲುವಾಟ್ನಿ ದಾವೆ ಇರುವುದರಿಂದ ಖರ್ಚಿನ ಬಗ್ಗೆ ಯಾವುದೇ ಆದೇಶ ಮಾಡಿರುವುದಿಲ್ಲ.**

**ಅಂತಿಮ ಆದೇಶದಂತೆ ಪ್ರಾಥಮಿಕ ಹುಕುಂ ನಾಮೆ ಮಾಡಲು ಈ ಮೂಲಕ ಆದೇಶಿಸಲಾಗಿದೆ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ, ಸೂಕ್ತ ತಿದ್ದುಪಡಿ ಮಾಡಿ ಇಂದು ದಿನಾಂಕ: 19-02-2018 ರಂದು ಬಹಿರಂಗ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು.)

**(ಶ್ರೀ ಪ್ರಶಾಂತ ಬಾದವಾಡಗಿ)**
ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಅಫಜಲಪುರ.

## **ಅನುಬಂಧ**

**ವಾದಿಯ ಪರ ಸಾಕ್ಷಿದಾರರ ಯಾದಿ :**

ಪಿ.ಡಬ್ಲ್ಯೂ-1: ರೇವಮ್ಮ ಗಂಡ ಬಸಯ್ಯ ಹಿರೇಮಠ

**<u>ವಾದಿ ಪರವಾಗಿ ನಿಶಾನೆಗೊಳಪಟ್ಟ ದಸ್ತಾವೇಜುಗಳ ಯಾದಿ:</u>**

ನಿ.ಪಿ-1 : ಭೂನ್ಯಾಯಾ ಮಂಡಳಿ ಅಫಜಲಪುರ
ಇವರ ಆದೇಶದ ದೃಢೀಕೃತ ಪ್ರತಿ

ನಿ.ಪಿ-2 : ನಮೂನೆ - 2

ನಿ.ಪಿ-3 ರಿಂದ 6 : ನಾಲ್ಕು ಪಹಣಿ ಪತ್ರಿಕೆಗಳು

ನಿ.ಪಿ-7 : ಕರ ತುಂಬಿದ ರಸೀದಿ

ನಿ.ಪಿ-8 : ಆಸ್ತಿ ಸಂಖ್ಯೆ:15/1 ರ ಕರಾಕರಣೆ ಪ್ರತಿ

ನಿ.ಪಿ-9 : ಅಂಚೆ ಲಕೋಟಿ

ನಿ.ಪಿ-10 : ಲಕೋಟೆಯಿಂದ ತೆಗೆದ ಪತ್ರ

ನಿ.ಪಿ-11 : ಮುಟೇಷನ ಆದೇಶದ ಪ್ರತಿ

ನಿ.ಪಿ-12 : ರಸೀದಿ

**<u>ಪ್ರತಿವಾದಿಯರ ಪರ ಹಾಜರುಪಡಿಸಿದ ಸಾಕ್ಷಿದಾರರ ಯಾದಿ :</u>**

ಡಿ.ಡಬ್ಲ್ಯೂ-1: ರುದ್ರಯ್ಯ ತಂದೆ ಬಸಯ್ಯ

ಡಿ.ಡಬ್ಲ್ಯೂ-2: ಮಲ್ಲಿನಾಥ ತಂದೆ ಬಸಯ್ಯ ಹಿರೇಮಠ

ಡಿ.ಡಬ್ಲ್ಯೂ-3: ಶರಣಮ್ಮ ಗಂಡ ಗುರಯ್ಯ

**<u>ಪ್ರತಿವಾದಿ ಪರವಾಗಿ ನಿಶಾನೆಗೊಳಪಟ್ಟ ದಸ್ತಾವೇಜುಗಳ ಯಾದಿ:</u>**

ನಿ.ಡಿ-1 ಮತ್ತು 2 : ತಹಶೀಲ್ದಾರ ಅಫಜಲಪುರ ರವರು ನೀಡಿದ ಎರಡು ನಡುವಳಿಕೆಗಳು

ನಿ.ಡಿ -3 : ಕಟ್ಟಡ ರಚನೆ ಪರವಾನಿಗೆ

ನಿ.ಡಿ-4 : ಮರಾಠಿ ಭಾಷೆಯಲ್ಲಿರುವ ಆಸ್ತಿಯ ಉತಾರೆ

ನಿ.ಡಿ-4ಎ : ಮರಾಠಿ ಭಾಷೆಯಲ್ಲಿದಿದ್ದು ಆಂಗ್ಲ ಭಾಷೆಯಲ್ಲಿ ಭಾಷಾಂತರ ಪ್ರತಿ

| | | |
|---|---|---|
| ನಿ.ಡಿ-5 | : | ಕರಾಕರಣೆ ದೃಢೀಕೃತ ಪ್ರತಿ |
| ನಿ.ಡಿ-5ಎ | : | ಕರಾಕರಣೆಯ ಇಂಗ್ಲೀಷ ಭಾಷಾಂತರ ಪ್ರತಿ |
| ನಿ.ಡಿ-6, 7, 8 | : | 3 ಪಹಣಿ ಪತ್ರಿಕೆಗಳು |
| ನಿ.ಡಿ-9 ರಿಂದ 19 | : | 11 ಪಹಣಿ ಪತ್ರಿಕೆಗಳು |
| ನಿ.ಡಿ-20 | : | ಮುಟೇಷನ ರಜಿಸ್ಟರ್ ಪ್ರತಿ |
| ನಿ.ಡಿ-21 | : | ಭೂ ನ್ಯಾಯ ಮಂಡಳಿ ಆದೇಶದ ಪ್ರತಿ |
| ನಿ.ಡಿ-22 | : | ತಹಶೀಲ್ದಾರರು ನೀಡಿದ ನಮೂನೆ-2 ರ ದೃಢೀಕೃತ ಪ್ರತಿ |
| ನಿ.ಡಿ-23 | : | ಪಾಸ್ ಪೋರ್ಟ್ |
| ನಿ.ಡಿ-24 | : | ಖರೀದಿ ಪತ್ರ |
| ನಿ.ಡಿ-25 | : | ಬ್ಯಾಂಕ್ ಸ್ಟೇಟ್‌ಮೆಂಟ್ |
| ನಿ.ಡಿ-26 | : | ಮರಾಠಿ ಭಾಷೆಯಲ್ಲಿ ಬರೆದ ಪತ್ರ |
| ನಿ.ಡಿ-26ಎ | : | ಇಂಗ್ಲೀಷ್ ಅನುವಾದ ಪತ್ರ |
| ನಿ.ಡಿ-26ಬಿ | : | ಅನುವಾದಕರ ಪ್ರಮಾಣ ಪತ್ರ |
| ನಿ.ಡಿ-27 | : | ಕೃಷಿ ಪಾಸ್ ಪುಸ್ತಕ |
| ನಿ.ಡಿ-28 | : | ಮರಾಠಿ ಭಾಷ್ಷೆಯಲ್ಲಿರುವ ಖರೀದಿ ಪತ್ರದ ದೃಢೀಕೃತ ಪ್ರತಿ |
| ನಿ.ಡಿ-28ಎ | : | ಇಂಗ್ಲೀಷ್ ಅನುವಾದ ಪ್ರತಿ |
| ನಿ.ಡಿ-28ಬಿ | : | ಅನುವಾದಕರ ಪ್ರಮಾಣ ಪತ್ರ |
| ನಿ.ಡಿ-29 | : | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವರು ನೀಡಿದ ಪತ್ರ |

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಅಫಜಲಪುರ

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು
(ಆದೇಶವು ಪ್ರತ್ಯೇಕ ಪುಟದಲ್ಲಿದೆ)

## ಆದೇಶ

**ವಾದಿಯ ದಾವೆಯನ್ನು ಭಾಗಶಃ ಪುರಸ್ಕರಿಸಲಾಗಿದೆ.**

**ದಾವಾದ ಆಸ್ತಿ ಪೈಕಿ ಅರ್ಜುಣಗಿ ಗ್ರಾಮದ ಜಮೀನು ಸರ್ವೇ ನಂ:52/ಎ ವಿಸ್ತೀರ್ಣ 07-ಎಕರೆ 13-ಗುಂಟೆ ಆಸ್ತಿಯಲ್ಲಿ ವಾದಿ 1/7 ಹಿಸ್ಸೆಯನ್ನು ಹಾಗೂ ಅರ್ಜುಣಗಿ ಗ್ರಾಮದ ಮನೆ ಸಂಖ್ಯೆ:15/1 ರಲ್ಲಿ 1/28 ಹಿಸ್ಸೆಯನ್ನು ಪಡೆಯಲು ಅರ್ಹಳು ಇರುತ್ತಾಳೆ.**

**ಪಾಲುವಾಟ್ನಿ ದಾವೆ ಇರುವುದರಿಂದ ಖರ್ಚಿನ ಬಗ್ಗೆ ಯಾವುದೇ ಆದೇಶ ಮಾಡಿರುವುದಿಲ್ಲ.**

**ಅಂತಿಮ ಆದೇಶದಂತೆ ಪ್ರಾಥಮಿಕ ಹುಕುಂ ನಾಮೆ ಮಾಡಲು ಈ ಮೂಲಕ ಆದೇಶಿಸಲಾಗಿದೆ.**

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಅಫಜಲಪುರ